

# ‘ಸಿಐಟಿ ಕ್ಯಾಟ್, ಕ್ಯಾಟ್ ಮಾನೆ ಬಿಲ್ಲಿ...’

ಖಯ್ಯಾಂ ಅವರ ನಿರ್ದೇಶನದ ಉಮ್ರಾವ್ ಜಾನ್ ಹಾಡುಗಳು ಆಶಾ ದನಿಯಲ್ಲಿನ ಠೆಹರಾವ್ ಅನ್ನು ಅದ್ಭುತವಾಗಿ ಜಗತ್ತಿನೆದುರಲ್ಲಿಟ್ಟಿತ್ತು. ಸಂಗೀತ ನಿರ್ದೇಶಕ ರವಿ ಅವರ ಅಚ್ಚುಮೆಚ್ಚಿನ ಹಾಡುಗಾರ್ತಿ ಆಗಿದ್ದರು ಆಶಾ. ಅವರಿಗಾಗಿ ಹಾಡಿದ ‘ಚಂದಮಾಮ ದೂರ್ ಕೆ’ ಆಶಾ ದನಿಯಲ್ಲಿ ಅಮ್ಮನ ಮಮತೆಯನ್ನು ತುಂಬಿ ತಂದಿತ್ತು. ಕಿಶೋರ್ ಅವರೊಂದಿಗೆ ಇವರಿಗಾಗಿ ಹಾಡಿದ, ‘ಸಿಐಟಿ ಕ್ಯಾಟ್, ಕ್ಯಾಟ್ ಮಾನೆ ಬಿಲ್ಲಿ...’ ತಮಾಷೆಯ ಹಾಡು. ಅಷ್ಟೇ ಅಲ್ಲ ಆಶಾ ಇವರಿಗಾಗಿ ವಖ್ತ್, ಚೌದವೀ ಕಾ ಚಾಂದ್, ಗುಮ್ರಾಹ್, ಹಮ್ರಾಜ್ ಇತ್ಯಾದಿ ಚಿತ್ರಗಳಿಗಾಗಿ ಹಾಡಿದ್ದಾರೆ.

ಆಶಾ ದನಿಯಲ್ಲಿನ ವೈವಿಧ್ಯ ಮತ್ತು ಸಾಧ್ಯತೆಗಳನ್ನು ಮೊದಲು ಗುರುತಿಸಿದವರಲ್ಲಿ ಎಸ್‌ಡಿ ಬರ್ಮನ್ ಸಹ ಒಬ್ಬರು. ಅವರೂ ಸಹ ಒಂದು ಹಂತದಲ್ಲಿ ಲತಾ ಜೊತೆ ಮಾತು ನಿಂತಿದ್ದಾಗ ಆಶಾರೊಡನೆ ಕೆಲಸ ಮಾಡಿದ್ದರು. ನೌ ದೋ ಗ್ಯಾರಾಹ್, ಕಾಲಾಪಾನಿ, ಕಾಲಾಬಜಾರ್, ಸುಜಾತಾ, ತೀನ್ ದೇವಿಯಾ ಇತ್ಯಾದಿ ಅವರ ಸಹಯೋಗದ ಚಿತ್ರಗಳು. 70ನೆಯ ದಶಕದಿಂದ ಹಿಡಿದು 90ರ ದಶಕದ ನಡುವಿನವರೆಗಿನಷ್ಟು ದೀರ್ಘಕಾಲ ಆಶಾ ಮತ್ತು ಬಪ್ಪಿಲಹರಿ ಜೊತೆಗೂಡಿ ಕೆಲಸ ಮಾಡಿದ್ದಾರೆ. ಹಥ್ಕಡಿ, ನಮಕ್ ಹಲಾಲ್, ಶರಾಬಿ, ಹಿಮ್ಮತ್ ವಾಲಾ, ಮವಾಲಿ, ತೋಫ ಒಂದಕ್ಕಿಂತ ಒಂದು ಹೆಚ್ಚು ಹಿಟ್ ಆದ ಚಿತ್ರಗಳು. ಇದು ನಿಜಕ್ಕೂ

ದಿಲ್ ಚೀಸ್ ಕ್ಯಾ ಹೈ ಆಪ್ ಮೇರಿ.. ಹಾಡಿಗೆ ರೇಖಾ ಭಾವಾಭಿನಯ

ಚಾಂದ್ ಕೆ ರಥ್ ಮೇ ರಾತ್ ಕೀ ದುಲ್ಹನ್ ಜಬ್ ಜಬ್ ಆಯೇಗೀ
ಯಾದ್ ಹಮಾರೀ ಆಪಕೆ ದಿಲ್ ಕೋ ತಡ್ಪಾ ಜಾಯೇಗೀ

ಹಾಡಿನುದ್ದಕ್ಕೂ ಆಶಾ ಅಳುತ್ತಲೇ ಇದ್ದರು ಎಂದು ಓಪಿ ನಯ್ಯರ್ ಅವರ ಜೀವನಚರಿತ್ರೆ ಬರೆದ ಪರಾಗ್ ದಿಮ್ರಿ ಬರೆಯುತ್ತಾರೆ. ಅಂದು ಆಶಾ ಸ್ಟುಡಿಯೊದಿಂದ ಹೊರಹೋಗುವಾಗ ನಯ್ಯರ್ ಅವರಿಂದಲೂ ದೂರ ಹೋಗಿದ್ದರು. ಆ ಹಾಡಿಗೆ ಫಿಲಂಫೇರ್ ಪ್ರಶಸ್ತಿ ಬಂದಿತು, ಆಶಾ ಹೋಗಿರಲಿಲ್ಲ. ಪ್ರಶಸ್ತಿ ಸ್ವೀಕರಿಸಿದ ನಯ್ಯರ್ ರಾತ್ರಿ ಇಡೀ ಮುಂಬೈ ಉದ್ದಕ್ಕೂ ಒಬ್ಬರೇ ಗಾಡಿ ಓಡಿಸುತ್ತಾ, ಕಡೆಗೆ ಅದನ್ನು ಸಿಟ್ಟಿನಿಂದ ಕಿಟಕಿಯಿಂದ ಹೊರಗೆ ಬಿಸುಟಿದ್ದರು. ಇಳಿವಯಸ್ಸಿನಲ್ಲಿ ನಯ್ಯರ್, ‘ಆಶಾ ನನ್ನ ಬದುಕಿನ ಅತ್ಯಂತ ಮುಖ್ಯವಾದ ವ್ಯಕ್ತಿ’ ಎಂದಿದ್ದರು..

ಆ ಪಾಡ್ಕಾಸ್ಟ್‌ನಲ್ಲಿ ಆಶಾ ಆರಿಸಿದ ಮೂರನೆಯ ಹಾಡು ಆರ್ ಡಿ ಬರ್ಮನ್ ಸಂಗೀತ ನೀಡಿದ ‘ಮೇರಾ ಕುಚ್ ಸಾಮಾನ್, ತುಮ್ಹಾರೆ ಪಾಸ್ ಪಡಾ ಹೈ...’ ಆರ್‌ಡಿ ಆಶಾ ಅವರ ಹಾಡುಗಾರಿಕೆಯ ಅಭಿಮಾನಿ. ‘ನನಗೆ ಅವರ ಪರಿಚಯ ಮಾಡಿಸಿ,’ ಎಂದು ತಂದೆ ಎಸ್‌ಡಿ ಬರ್ಮನ್ ಅವರಿಗೆ ದುಂಬಾಲು ಬಿದ್ದು, ಮೊದಲ ಸಲ ಭೇಟಿಯಾದಾಗ ಆಶಾ ಕಾಲಿಗೆ ನಮಸ್ಕರಿಸಿ ಅವರಿಂದ ಆಟೊಗ್ರಾಫ್ ತೆಗೆದುಕೊಂಡಿದ್ದ ದಪ್ಪ ಕನ್ನಡಕದ ಹುಡುಗ. ಆಮೇಲೆ ಆರ್‌ಡಿ ಸಹ ಚಿತ್ರರಂಗಕ್ಕೆ ಬರುತ್ತಾರೆ. ಅವರ ಮದುವೆ ಆಗುತ್ತದೆ, ಮುರಿಯುತ್ತದೆ. ಆಶಾರನ್ನು ಮನದಲ್ಲೇ ಪ್ರೀತಿಸುತ್ತಿದ್ದ ಆರ್‌ಡಿ ಅವರಿಗಾಗಿ ಆಗಾಗ ಅನಾಮಿಕನಂತೆ ಹೂ ಕಳಿಸುತ್ತಿರುತ್ತಾರೆ. ಒಮ್ಮೆ ಅವರು ಮತ್ತು ಇನ್ನೊಬ್ಬ ಗೆಳೆಯರು ಆಶಾ ಅವರೊಟ್ಟಿಗೆ ಮಾತನಾಡುತ್ತಿರುವಾಗಲೇ ಹೂ ಬರುತ್ತದೆ. ‘ಯಾರು ಕಳಿಸಿದ್ದು’ ಎಂದು ಆ ಗೆಳೆಯರು ತಮಾಷೆ ಮಾಡುತ್ತಾರೆ, ‘ಯಾರೋ ಪಾಗಲ್’ ಆಶಾ ಉತ್ತರಿಸುತ್ತಾರೆ. ‘ಇದೋ ಇವನೇ ಆ ಪಾಗಲ್’ ಎಂದು ಅವರು ಆರ್‌ಡಿ ಕಡೆಗೆ ಕೈತೋರುತ್ತಾರೆ. ಅವರ ಪ್ರೇಮ ಶುರುವಾಗುತ್ತದೆ. ರಾಹುಲ್ ಅವರಿಗಿಂತ 6–7 ವರ್ಷಗಳಿಗೆ ಕಿರಿಯ. ಕೆಲವು ದಿನಗಳ ನಂತರ ಅವರಿಬ್ಬರ ವಿವಾಹವಾದಾಗ ಚಿತ್ರಜಗತ್ತು, ಸಮಾಜ ಬೆಚ್ಚಿಬಿದ್ದಿರಬೇಕು. ಆಶಾಗೆ ಆಗ 47ರ ಸುಮಾರು ವಯಸ್ಸು ಮತ್ತು ಆಕೆ ಮೂರು ಮಕ್ಕಳ ತಾಯಿ. ಆದರೆ ಆಶಾಗೆ ಮೊದಲಿನಿಂದಲೂ ಸಮಾಜವನ್ನು ಮೆಚ್ಚಿಸುವ ಯಾವುದೇ ಬಯಕೆ ಇರಲಿಲ್ಲ! ಖೂಬ್‌ಸೂರತ್ ಚಿತ್ರಕ್ಕಾಗಿ ಅವರೇ ಹಾಡಿದ ಹಾಡು, ‘ಸಾರೇ ನಿಯಮ್ ತೋಡ್ದೋ, ನಿಯಮ್ ಸೆ ಚಲ್‌ನಾ ಛೋಡ್‌ದೋ!’ ಆಕೆಯೊಂದು ಮುಕ್ತಜೀವ. ಆಕೆ ಮತ್ತು ಆರ್‌ಡಿ ಸೇರಿ ಒಂದು ಗಂಧರ್ವಲೋಕವನ್ನೇ ನಿರ್ಮಿಸಿದ್ದರು.

ಆಶಾಗೆ ದೇಶ ವಿದೇಶಗಳ ಸಂಗೀತ ಕೇಳಿಸುತ್ತಿದ್ದ, ಹೊಸ ಪ್ರಯೋಗಗಳಿಗೆ ಪ್ರೋತ್ಸಾಹಿಸುತ್ತಿದ್ದ ಅವರನ್ನು ಆಶಾ ಖಾಸಗಿಯಾಗಿ ‘ಬಬ್’ ಎಂದು ಕರೆಯುತ್ತಿದ್ದರು. ಆರ್‌ಡಿಗೆ ಆಶಾ ‘ಬಬುವಾ’. ಅವರಿಬ್ಬರ ಸಹಯೋಗದಲ್ಲಿ ಬಂದ ಹಾಡುಗಳಲ್ಲಿ ಅದೆಷ್ಟು ನಾವೀನ್ಯತೆ ಇತ್ತು! ‘ದಮ್ ಮಾರೋ ದಮ್’ ಎಂತಹ ಐಕಾನಿಕ್ ಹಾಡು ಎಂದರೆ, ಎಲ್ಲಿ ಇದು ಚಿತ್ರವನ್ನೇ ಮೀರಿ ಬೆಳೆಯುವುದೋ ಎಂದು ದೇವಾನಂದ್ ಯೋಚಿಸಿದ್ದರಂತೆ! ‘ಪಿಯಾ ತೂ ಅಬ್ ತೋ ಆಜಾ,’ ‘ಮೆಹಬೂಬಾ ಮೆಹಬೂಬಾ.’ ‘ಜಾನೆ–ಜಾ ಢೂಂಡತಾ ಫಿರ್ ರಹಾ..’ ಹೀಗೆ ಒಂದಕ್ಕಿಂತ ಒಂದು ಚೆಂದದ ಹಾಡುಗಳು. ಇದಕ್ಕೆ ಪುಟವಿಟ್ಟಂತಾಗಿದ್ದು ಈ ಜೋಡಿಯ ಜೊತೆಗೆ ಗುಲ್ಜಾರ್ ಸೇರಿದಾಗ. ಇಜಾಜತ್ ಚಿತ್ರದಲ್ಲಿ ಒಂದೊಂದು ಹಾಡಿಗೆ ಒಂದೊಂದು ರಂಗು! ‘ಕತರಾ ಕತರಾ ಮಿಲ್ತಾ ಹೈ, ಕತರಾ ಕತರಾ ಜೀನೆ ದೋ’ನಲ್ಲಿ ಹೆಂಡತಿಯ ನಿರುಮ್ಮಳ ಪ್ರೇಮ ಇದ್ದರೆ, ‘ಖಾಲಿ ಹಾಥ್ ಶ್ಯಾಂ ಆಯಿ ಹೈ, ಖಾಲಿ ಹಾಥ್ ಜಾಯೇಗಿ’ಯಲ್ಲಿ ಜೀವ ಮಡುಗಟ್ಟಿದ ನೋವು. ಆದರೆ ಅಂದಿಗೂ ಇಂದಿಗೂ ಈ ಮೂವರ ವೃತ್ತಿಬದುಕಿನ ಮುಕುಟಮಣಿಗಳಲ್ಲಿ ಒಂದು ಎಂದರೆ, ‘ಮೇರಾ ಕುಚ್ ಸಾಮಾನ್, ತುಮ್ಹಾರೆ ಪಾಸ್ ಪಡಾ ಹೈ...’ ಇಂದಿಗೂ ಇದು ಪ್ರೇಮಿಗಳ, ವಿರಹಿಗಳ ಎದೆಯ ಹಾಡು. ಗುಲ್ಜಾರ್ ಈ ಹಾಡು ಬರೆದುಕೊಂಡು ಬಂದಾಗ ಓದಿದ ಆರ್‌ಡಿ ‘ಇದೇನಿದು, ದಿನಪತ್ರಿಕೆ ಜಾಹೀರಾತು ಇದ್ದಹಾಗಿದೆ’ ಎಂದು ಮೂಗುಮುರಿದು, ಹಾಳೆಯನ್ನು ಪಕ್ಕಕ್ಕಿಟ್ಟಿದ್ದರಂತೆ. ಅಲ್ಲಿಗೆ ಬಂದ ಆಶಾ ಅದನ್ನೆತ್ತಿಕೊಂಡು ಮೊದಲ ಎರಡು ಸಾಲುಗಳನ್ನು ಗುನುಗುನಿಸಿದಾಗ ಅದು ಹಾಡಾಯಿತು. ಹತ್ತು ನಿಮಿಷದಲ್ಲಿ ಆರ್‌ಡಿ ಅದನ್ನು ಪೂರ್ತಿ ಮಾಡಿದ್ದರಂತೆ. ಆದರೆ ಈ ಸಂಬಂಧದಲ್ಲೂ ಹಲವು ಏರುಪೇರುಗಳಿದ್ದವು. ಆಶಾ ವಿಪರೀತ ಶಿಸ್ತಿನ ಹೆಣ್ಣು, ರಾಹುಲ್ ಹಾಗಲ್ಲ. ಬಿಸಿ ಚಹಾ ಕೊಟ್ಟರೆ ಅದಕ್ಕೆ ನೀರು ಸೇರಿಸಿ ಕುಡಿಯುತ್ತಿದ್ದ, ಒಂದರ ಹಿಂದೆ ಒಂದು ಸಿಗರೇಟು ಸೇದುತ್ತಿದ್ದ, ವಿಪರೀತ ಕುಡಿಯುತ್ತಿದ್ದ ವಿಲಕ್ಷಣ ಪ್ರತಿಭಾವಂತ. ಇಬ್ಬರೂ ಬೇರೆಬೇರೆ ವಾಸಿಸಲು ಪ್ರಾರಂಭಿಸುತ್ತಾರೆ, ಆದರೆ ಸ್ನೇಹಿತರಾಗಿಯೇ



ಲ್ಯಾಕ್ಮೆ ಫ್ಯಾಷನ್ ವೀಕ್‌ನಲ್ಲಿ ರೂಪದರ್ಶಿಯಾಗಿ ಕಂಡ ಆಶಾ

ನಕ್ಷತ್ರವಾದ ಆಶಾ ತಾಯಿ